

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **18–06–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇತ್ತೀಚಿಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿದೆ. ಹಝ್ರತ್ ಅಬೂಬಕರ್(ರ)ರ ಮರಣದ ಸಮಯ ಸಮೀಪವಾದಾಗ, ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಉಸ್ಮಾನ್(ರ)ರನ್ನು ಬೇರೆ ಬೇರೆಯಾಗಿ ಕರೆದುಕೊಂಡು ಹಝ್ರತ್ ಉಮರ್(ರ)ರ ಕುರಿತು ಕೇಳಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಉಮರರನ್ನು ಅತ್ಯಂತ ಶ್ರೇಷ್ಠರೆಂದು ಹೇಳುವುದರೊಂದಿಗೆ ಅವರ ಸ್ವಭಾವದ ಕಾಠಿಣ್ಯದ ಬಗ್ಗೆ ತಿಳಿಸಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: “ನಾನು ಸೌಮ್ಯವಾಗಿ ವರ್ತಿಸುವ ಕಾರಣದಿಂದ ಅವರು ಕಠಿಣವಾಗಿ ವರ್ತಿಸುತ್ತಾರಷ್ಟೆ, ಅವರಿಗೆ ನೇತೃತ್ವ ಸ್ಥಾನ ಸಿಗುವಾಗ ಅವರು ತನ್ನ ಅನೇಕ ಸಂಗತಿಗಳನ್ನು ಬಿಟ್ಟುಬಿಡುವರು.” ಎಂದರೆ ಸ್ವಭಾವದ ಕಾಠಿಣ್ಯವನ್ನು ಕಡಿಮೆಗೊಳಿಸುವರು. ಹಝ್ರತ್ ಉಮರರ ಕುರಿತು ಹಝ್ರುರತ್ ಉಸ್ಮಾನ್(ರ) ಉತ್ತಮ ಅಭಿಪ್ರಾಯವನ್ನು ಪ್ರಕಟಿಸುತ್ತಾ ಹೀಗೆ ಹೇಳಿದರು: “ಹಝ್ರತ್ ಉಮರರ ಅಂತರಂಗ ಅವರ ಬಹಿರಂಗಕ್ಕಿಂತ ಉತ್ತಮವಾದುದಾಗಿದೆ.” ಆ ದಿನಗಳಲ್ಲಿ ಹಝ್ರತ್ ಅಬೂಬಕರರ ಸನ್ನಿಧಿಯಲ್ಲಿ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಹಾಜರಾದರು. ಅವರು ಹಝ್ರತ್ ಉಮರ್(ರ)ರ ಕಠಿಣ ಸ್ವಭಾವದ ಕಾರಣದಿಂದ ತನ್ನ ಸುರಕ್ಷೆಯ ಬಗ್ಗೆ ಚಿಂತೆಯನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು: ಅಲ್ಲಾಹನು ನಿಮ್ಮೊಡನೆ ಪ್ರಜೆಗಳ ಕುರಿತು ಕೇಳುವನು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಪ್ರಭು ಉಮರರ ಕುರಿತು ಕೇಳಿದರೆ, ನಾನು ಅದಕ್ಕೆ ಉತ್ತರವಾಗಿ ಹೀಗೆ ಹೇಳುವೆನು: “ನಾನು ನಿನ್ನ ದಾಸರಲ್ಲಿ ಅತ್ಯಂತ ಶ್ರೇಷ್ಠನನ್ನು ನಿನ್ನ ದಾಸರ ಮೇಲೆ ಖಲೀಫರನ್ನಾಗಿ ಮಾಡಿರುವೆನು.”

ಅನಂತರ ಹಝ್ರತ್ ಉಸ್ಮಾನ್‌ರನ್ನು ಹಝ್ರತ್ ಅಬೂಬಕರ್(ರ) ಕರೆದು ಹಝ್ರತ್ ಉಮರ್(ರ)ರ ಪರವಾಗಿ ವಸಿಯ್ಯತ್ ಬರೆಸಿದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಲಿಖಿತವನ್ನು ಬರೆಯುತ್ತಿದ್ದಾಗ ಹಝ್ರತ್ ಅಬೂಬಕರ್(ರ) ಪ್ರಜ್ಞಾಹೀನರಾದರು. ಅಷ್ಟರಲ್ಲಿ ಹಝ್ರತ್ ಉಮರ್(ರ)ರ ಹೆಸರನ್ನು ಹಝ್ರತ್ ಉಸ್ಮಾನ್(ರ) ಬರೆದಿದ್ದರು. ಹಝ್ರತ್ ಅಬೂಬಕರ್(ರ)ರಿಗೆ ಪ್ರಜ್ಞೆ ಮರಳಿ ಬಂದಾಗ “ನೀವು ಏನು ಬರೆದಿರಿ” ಎಂದು ಅವರು ಹಝ್ರತ್ ಉಸ್ಮಾನ್‌ರೊಡನೆ ಕೇಳಿದರು. ನಾನು ಉಮರರ ಹೆಸರನ್ನು ಬರೆದೆನು ಎಂದು ಹಝ್ರತ್ ಉಸ್ಮಾನ್(ರ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಬರೆಸಲು ಉದ್ದೇಶಿಸಿದ್ದ ಹೆಸರನ್ನೇ ನೀವು ಬರೆದಿರುವಿರಿ.

ವಸಿಯ್ಯತ್ ಬರೆಯಲಾದ ನಂತರ, ಅದನ್ನು ಜನರ ಮುಂದೆ ಓದಿ ಹೇಳಲು ಹಝ್ರತ್ ಅಬೂಬಕರ್(ರ) ಹೇಳಿದರು. ಹೀಗೆ ಹಝ್ರತ್ ಉಸ್ಮಾನ್(ರ) ಜನರನ್ನು ಒಟ್ಟುಸೇರಿಸಿಕೊಂಡು ವಸಿಯ್ಯತನ್ನು ಓದಿಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಖಲೀಫರನ್ನಾಗಿ ನಿಶ್ಚಯಿಸಿದ ವ್ಯಕ್ತಿಯಲ್ಲಿ ನೀವು ಸಂತೃಪ್ತರೇ? ನಾನು ಯಾವುದಾದರೂ ಸಂಬಂಧದ ಕಾರಣದಿಂದ ಅವರನ್ನು ನಿಮ್ಮ ಮೇಲೆ ಖಲೀಫರನ್ನಾಗಿ ನಿಶ್ಚಯಿಸಲಿಲ್ಲ. ಅಲ್ಲಾಹನಾಣೆ, ನಾನು ಇದರ ಬಗ್ಗೆ ಆಲೋಚಿಸುವುದರಲ್ಲಿ ಯಾವುದೇ ಕೊರತೆಯನ್ನು ಮಾಡಿಲ್ಲ. ಆದ್ದರಿಂದ ಅವರ ಮಾತನ್ನು ಕೇಳಿರಿ ಮತ್ತು ಅನುಸರಿಸಿರಿ. ಆಗ ಜನರು ಹೇಳಿದರು: “ನಾವು ಆಲಿಸಿದ್ದೇವೆ ಮತ್ತು ಅನುಸರಿಸಿದ್ದೇವೆ.” ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಉಮರರನ್ನು ಕರೆದು ಅವರೊಡನೆ ತಖ್ವ ಕೈಗೊಳ್ಳಲು ಮತ್ತು ಜನರೊಡನೆ ಸೌಮ್ಯವಾಗಿ ವರ್ತಿಸಲು ಉಪದೇಶಿಸಿದರು.

ಹಝ್ರತ್ ಉಮರ್(ರ) ಖಲೀಫರಾದ ನಂತರ ಮಾಡಿದ ಮೊದಲ ಭಾಷಣದ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಿಮ್ಮನ್ನು ನನ್ನ ಮೂಲಕ ಮತ್ತು ನನ್ನನ್ನು ನಿಮ್ಮ ಮೂಲಕ ಪರೀಕ್ಷಿಸುತ್ತಿದ್ದಾನೆ. ನನ್ನ ಮುಂದೆ ಇರಿಸಲಾಗುವ ನಿಮ್ಮ ಯಾವುದೇ ಕಾರ್ಯವನ್ನು ನಾನಲ್ಲದೇ ಬೇರೆ ಯಾರೂ ನೋಡುವುದಿಲ್ಲ. ಯಾವ ಕಾರ್ಯ ನನ್ನಿಂದ ದೂರವಿದೆಯೋ ಅದಕ್ಕಾಗಿ ನಾನು ಸಮರ್ಥರಾದ ಮತ್ತು ವಿಶ್ವಾಸಯೋಗ್ಯರಾದ ಜನರನ್ನು ನಿಶ್ಚಯಿಸುವೆನು. ಅರೇಬಿಯರ ಉದಾಹರಣೆ ಲಗಾಮಿನಲ್ಲಿ ಕಟ್ಟಲಾದ ಒಂಟೆಯ ಹಾಗೆಯಾಗಿದೆ. ಅದು ತನ್ನ ನೇತಾರನ ಹಿಂದೆ ನಡೆಯುತ್ತದೆ. ಆದ್ದರಿಂದ ಹೇಗೆ ನಡೆಸುತ್ತಿದ್ದೇನೆ ಎಂದು ನೇತಾರ ಸ್ವತಃ ನೋಡಬೇಕು. ನನ್ನ ಬಗ್ಗೆ ಹೇಳುವುದಾದರೆ ನಾನು ಖಂಡಿತ ಅವರನ್ನು ಸರಿಯಾದ ಮಾರ್ಗದಲ್ಲಿ ಇರಿಸುವೆನು.

ಹಝ್ರತ್ ಉಮರ್(ರ) ಖಲೀಫರಾದ ನಂತರ ಮೂರನೇ ದಿನ ವಿಶದವಾದ ಭಾಷಣವನ್ನು ಮಾಡಿದರು. ಅದರಲ್ಲಿ ಅಲ್ಲಾಹನ ಸ್ತುತಿಸ್ತೋತ್ರಗಳನ್ನು ಮಾಡಿದ ಬಳಿಕ ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡಿ ನಂತರ ಹೀಗೆ ಹೇಳಿದರು: ಜನರು ನನ್ನ ಕಠಿಣ ಸ್ವಭಾವದ ಕಾರಣದಿಂದ ಹೆದರುತ್ತಿದ್ದಾರೆ ಎಂದು ನನಗೆ ಮಾಹಿತಿ ಲಭಿಸಿದೆ. ಹಝ್ರತ್ ಪೈಗಂಬರ್(ಸ)ರ ಕಾಲದಲ್ಲೂ ಮತ್ತು ಅಬೂಬಕರರ

ಖಿಲಾಫತ್ ಕಾಲದಲ್ಲೂ ನಾನು ಖಂಡಿತವಾಗಿಯೂ ಅವರಿಬ್ಬರ ಕೈಗಳಲ್ಲಿ ಇರುವ ತೆರೆದ ಖಡ್ಗದಂತಿದ್ದೆ. ಅವರು ಬಯಸುವಾಗ ನನ್ನನ್ನು ಕವಚದಲ್ಲಿ ಇರಿಸುತ್ತಿದ್ದರು ಮತ್ತು ಬಯಸುವಾಗ ನನ್ನನ್ನು ತೆರೆದು ಬಿಡುತ್ತಿದ್ದರು. ಎಲೈ ಜನರೇ, ಈಗ ನಾನು ನಿಮ್ಮ ಕಾರ್ಯಗಳ ಅಧಿಕಾರಿಯಾಗಿರುವೆನು. ಆದ್ದರಿಂದ ಈಗ ನಾನು ಆ ಕಾಠಿಣ್ಯವನ್ನು ಕಡಿಮೆಗೊಳಿಸಿದ್ದೇನೆ. ಈಗ ಅದು ಮುಸ್ಲಿಮರ ಮೇಲೆ ದೌರ್ಜನ್ಯ ನಡೆಸುವವರ ಮತ್ತು ಅವರಮೇಲೆ ಕೈಯೆತ್ತುವವರ ವಿರುದ್ಧ ಪ್ರಕಟವಾಗುವುದು. ಸಾತ್ವಿಕರಾದ, ಧರ್ಮಿಷ್ಠರಾದ ಮತ್ತು ಶ್ರೇಷ್ಠರಾದ ಜನರೊಂದಿಗೆ, ಅವರು ಪರಸ್ಪರ ತೋರಿಸುವ ಸೌಮ್ಯ ಸ್ವಭಾವಕ್ಕಿಂತ ಹೆಚ್ಚು ಮೃದುವಾಗಿ ನಾನು ಅವರೊಡನೆ ವರ್ತಿಸುವೆನು. ಎಲೈ ಜನರೇ, ಯುದ್ಧ ಸಂಪತ್ತು ಮತ್ತು ನಿಮ್ಮ ಮೇಲೆ ಖರ್ಚು ಮಾಡಬೇಕಾದ ಸಂಪತ್ತಿನಲ್ಲಿ ಯಾವುದನ್ನೂ ನಾನು ರಹಸ್ಯವಾಗಿ ಇಡದಂತೆ ನೋಡಲು ನಿಮಗೆ ಹಕ್ಕಿದೆ. ನಿಮ್ಮ ಪಿಂಚಣಿ ಮತ್ತು ನಿಮ್ಮ ದಿನಸಿಗಳನ್ನು ನಿಮಗೆ ನಾನು ಕೊಡುವೆನು, ನೀವು ಸಂಕಷ್ಟಕ್ಕೆ ಒಳಗಾಗದಂತೆ ನಾನು ನೋಡುವೆನು, ನೀವು ಸೈನ್ಯದಲ್ಲಿ ಸೇರಿಕೊಂಡು ಮನೆಯಲ್ಲಿ ಇಲ್ಲದಿರುವಾಗ ನಿಮ್ಮ ಮಕ್ಕಳ ತಂದೆಯಾಗಿ ನಾನು ಇರುವೆನು.

ಹಝ್ರತ್ ಉಮರರ ಖಿಲಾಫತ್ ಕಾಲಘಟ್ಟದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಇಸ್ಲಾಂ ಮತ್ತು ಮುಸ್ಲಿಮರ ಅಭಿವೃದ್ಧಿಗಾಗಿ ಹಝ್ರತ್ ಉಮರ್[ರ] ಎಷ್ಟು ತ್ಯಾಗಗಳನ್ನು ಮಾಡಿದ್ದರು ಎಂದರೆ, ಹಝ್ರತ್ ಪೈಗಂಬರ್[ಸ]ರ ಬಗ್ಗೆ ಆಕ್ಷೇಪಗಳನ್ನು ಎತ್ತುವ ಯುರೋಪಿಯನ್ ಸಾಹಿತಿಗಳು ಕೂಡ ಅಬೂಬಕರ್ ಮತ್ತು ಉಮರರ ಬಗ್ಗೆ ಪ್ರಸ್ತಾಪಿಸುವಾಗ, ಈ ವ್ಯಕ್ತಿಗಳು ಮಾಡಿದಂತಹ ಪರಿಶ್ರಮ ಮತ್ತು ತ್ಯಾಗದ ಉದಾಹರಣೆ ಲೋಕದ ಅಧಿಕಾರಿಗಳಲ್ಲಿ ಯಾರಲ್ಲೂ ಕಾಣಲು ಸಿಗುವುದಿಲ್ಲ ಎಂದು ಸಮ್ಮತಿಸುತ್ತಾರೆ.

ಹಝ್ರತ್ ಉಮರರ ನ್ಯಾಯಪಾಲನೆ ಮತ್ತು ಅಂತರ್ದೃಷ್ಟಿಗೆ ಕಾರಣ ಅವರಿಗೆ ಹಝ್ರತ್ ಪೈಗಂಬರ್[ಸ]ರೊಂದಿಗೆ ಇದ್ದ ಅನುಸರಣೆ ಮತ್ತು ದೇವಭಯವಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ]ರ ಸಹವಾಸದಲ್ಲಿ ಸದಾ ಇರುವ ವ್ಯಕ್ತಿಯು ಮೃತಪಡುವಾಗ ಹಝ್ರತ್ ಪೈಗಂಬರ್[ಸ]ರ ಪಾದಗಳಲ್ಲಿ ಸ್ಥಾನ ಸಿಗಬೇಕೆಂದು ಬಯಸುತ್ತಾನೆ. ಹಝ್ರತ್ ಪೈಗಂಬರ್[ಸ] ಅಲ್ಲಾಹನ ಸಂಪ್ರೀತಿಗಾಗಿ ಕೆಲಸ ಮಾಡುತ್ತಿರಲಿಲ್ಲವೆಂದು ಅವರ ಯಾವುದಾದರೂ ಕೃತ್ಯದಿಂದ ಸಾಬೀತಾಗಿದ್ದರೆ, ಹಝ್ರತ್ ಉಮರ್[ರ]ರಂತಹ ವ್ಯಕ್ತಿಗಳು ಉನ್ನತ ಪದವಿಯನ್ನು ತಲುಪಿದ ನಂತರವೂ ಹಝ್ರತ್ ಪೈಗಂಬರ್[ಸ]ರ ಪಾದದಡಿಯಲ್ಲಿ ಸ್ಥಾನ ಸಿಗಬೇಕೆಂದು ಬಯಸುತ್ತಿದ್ದರೇ?

ಹಝ್ರತ್ ಪೈಗಂಬರ್[ಸ]ರ ಕುಟುಂಬದೊಂದಿಗೆ ಹಝ್ರತ್ ಉಮರ್[ರ]ರಿಗೆ ಇದ್ದ ಗೌರವಾದರದ ಕುರಿತು ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಇರಾನಿನ ಮೇಲೆ ವಿಜಯ ಸಾಧಿಸಿದ ನಂತರ ಅಲ್ಲಿಂದ ಗೋಧಿಯನ್ನು ಮೃದುವಾದ ಹಿಟ್ಟನ್ನಾಗಿ ಮಾಡುವ ಬೀಸುಕಲ್ಲುಗಳನ್ನು ತರಲಾದಾಗ, ಮೊದಲ ಬಾರಿಗೆ ಅರೆಯಲಾದ ಗೋಧಿಹಿಟ್ಟನ್ನು ಹಝ್ರತ್ ಉಮರ್[ರ] ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರಿಗೆ ಕಳುಹಿಸಿದರು. ಹಝ್ರತ್ ಪೈಗಂಬರ್[ಸ]ರೊಂದಿಗೆ ಹಝ್ರತ್ ಆಯಿಶರಿಗೆ ಇದ್ದ ಪ್ರೀತಿ ಪ್ರೇಮದ ಕಾರಣದಿಂದ ಆ ಹಿಟ್ಟಿನಿಂದ ಮಾಡಲಾದ ರೊಟ್ಟಿಯ ಒಂದು ತುತ್ತನ್ನು ಬಾಯಿಗೆ ಹಾಕಿದ ಕೂಡಲೇ ಹಝ್ರತ್ ಆಯಿಶ ಅತ್ತುಬಿಟ್ಟರು. ಅವರು ಹೀಗೆ ಹೇಳಿದರು: ಯಾರ ಕಾರಣದಿಂದ ನಮಗೆ ಈ ಅನುಗ್ರಹಗಳು ಸಿಕ್ಕಿತೋ ಅವರಿಗೆ ಈ ವರದಾನಗಳು ಸಿಗಲಿಲ್ಲ. ಆದರೆ ನಾವು ಈ ವರದಾನಗಳನ್ನು ಉಪಯೋಗಿಸುತ್ತಿದ್ದೇವೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಇಮಾಂ ಹಸನ್ ಮತ್ತು ಇಮಾಂ ಹುಸೈನ್‌ರನ್ನು ಬಹಳ ಗೌರವಿಸುತ್ತಿದ್ದರು. ಅವರಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ಹಝ್ರತ್ ಉಮರ್[ರ] ಜನರಿಗೆ ಪಿಂಚಣಿಗಳನ್ನು ನಿಶ್ಚಯಿಸಿದಾಗ ಹಝ್ರತ್ ಪೈಗಂಬರ್[ಸ]ರ ಅತ್ಯಂತ ನಿಕಟ ಸಂಬಂಧಿಕರಿಂದ ಆರಂಭಿಸಿದರು. ಅವರು ಮೊದಲು ಹಝ್ರತ್ ಅಬ್ಬಾಸ್[ರ] ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಸಿಗಬೇಕಾದ ಭಾಗವನ್ನು ನಿಶ್ಚಯಿಸಿದರು.

(ಹುಝೂರ್ ಹಝ್ರತ್ ಉಮರ್[ರ]ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗಾಇಬ್ ನಿರ್ವಹಿಸುವುದಾಗಿ ಘೋಷಿಸಿದರು.) ಮೊದಲ ಪ್ರಸ್ತಾಪ ಮಾಜಿ ನಾಝಿರ್ ಬೈತುಲ್ ಮಾಲ್ ಆದ ದಿವಂಗತ ದರ್ವೇಶ್ ಫೈಝ್ ಅಹ್ಮದ್ ಗುಜರಾತಿಯವರ ಪತ್ನಿ ಸುಹೈಲ ಮಹ್‌ಬೂಬ್‌ರದ್ದಾಗಿದೆ. 90ನೇ ವಯಸ್ಸಿನಲ್ಲಿ ಅವರು ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಬಿಹಾರಿನ ವಿದ್ಯಾವಂತ ಮನೆತನಕ್ಕೆ ಸೇರಿದವರಾಗಿದ್ದರು. ಅವರ ತಂದೆ ಅಹ್ಮದಿಯಾಗಿರಲಿಲ್ಲ. ಆದರೆ ಅವರ ತಾಯಿಯ ತಂದೆ ಬೈಅತ್ ಮಾಡಿದ ನಂತರ ಅವರ ತಾಯಿ ಸ್ವತಃ ಓದಿ ಅಹ್ಮದಿಯಾಗಿದ್ದರು. ಅವರು ಜೀವಿತವನ್ನು ವಖ್ಫ್ ಮಾಡಿದ್ದರು. ಆಗ ಆ ಸಮಯದಲ್ಲಿ ನಾಝಿರ್ ಖಿದ್‌ಮತೇ ದರ್ವೇಶ್ ಆಗಿದ್ದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಅವರ ವಖ್‌ಫಿನ ಪತ್ರಕ್ಕೆ ಹೀಗೆ ಉತ್ತರ ಬರೆದರು: ನೀವು ವಖ್‌ಫ್ ಮಾಡಿರುವುದು ತಿಳಿಯಿತು. ನಿಮ್ಮ ಈ ತೀರ್ಮಾನ ಬಹಳ ಶ್ಲಾಘನೀಯವಾದುದಾಗಿದೆ. ವಖ್‌ಫ್ ಮಾಡಿರುವ ಕಾರಣದಿಂದ ನಿಮ್ಮ ಮೊದಲ ಕರ್ತವ್ಯವೇನೆಂದರೆ, ಧಾರ್ಮಿಕ ಅರಿವನ್ನು ಕಲಿಯಬೇಕು. ಅತ್ಯುತ್ತಮ ಮಾದರಿ ಸ್ಥಾಪಿಸಲು ನಿಮ್ಮ ಕೃತ್ಯಗಳನ್ನು ಇಸ್ಲಾಂ ಮತ್ತು ಅಹ್ಮದಿಯ್ಯತ್ ಪ್ರಕಾರ ಮಾಡಬೇಕು. 1964ರಲ್ಲಿ ದಿವಂಗತರ ವಿವಾಹ ಚೌಧರಿ ಅಬ್ದುಲ್ಲಾಹ್ ಸಾಹಿಬ್ ದರ್ವೇಶ್‌ರೊಂದಿಗೆ ನಡೆಯಿತು. ಅವರಿಂದ ಒಬ್ಬಳು ಮಗಳು ಜನಿಸಿತು. ಆದರೆ ಸ್ವಲ್ಪ ಕಾಲದ ನಂತರ ಅವರ ವಿವಾಹ ವಿಚ್ಛೇದನ ಆಯಿತು. ಅನಂತರ ಅವರ ಎರಡನೇ ವಿವಾಹ ದರ್ವೇಶ್ ಆದ ಚೌಧರಿ ಫೈಝ್ ಅಹ್ಮದ್ ಗುಜರಾತಿ ಸಾಹಿಬ್‌ರೊಂದಿಗೆ ನಡೆಯಿತು. ಅವರಿಂದ ಒಬ್ಬ ಗಂಡು ಮಗು ಜನಿಸಿತು. ಆದರೆ ಆ ಮಗು ಕಿರಿವಯಸ್ಸಿನಲ್ಲೇ

ಮೃತಪಟ್ಟಿತು. ದಿವಂಗತರಿಗೆ ನಿವೃತ್ತರಾಗುವ ತನಕ ಸುಮಾರು 30 ವರ್ಷಗಳ ಕಾಲ ಖಾದಿಯಾನಿನ ನುಸ್ರತ್ ಹೈಸ್ಕೂಲಿನಲ್ಲಿ ಹೆಡ್‌ಮಿಸ್‌ಟ್ರಸ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತು.

(ನಂತರ ಹುಝೂರ್, ಖಾದಿಯಾನಿನ ನಝಾಮತ್ ತಾಮೀರಾತಿನ ಸುಪರ್‌ವೈಸರ್ ಆದ ಶೇಖ್ ಮುಬಶ್ಶಿರ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು.) ಅವರು ಒಡಿಶದ ಕೇರಂಗ್ ಜಮಾಅತಿನವರಾಗಿದ್ದರು. ಅವರು ಕೊರೊನದ ಕಾರಣದಿಂದ 33ನೇ ವಯಸ್ಸಿನಲ್ಲಿ ನಿಧನರಾದರು. ದಿವಂಗತರು ಜನ್ಮತಃ ಅಹ್ಮದಿಯಾಗಿದ್ದರು. ಹಳೆಯ ಅಹ್ಮದೀ ಕುಟುಂಬದವರಾಗಿದ್ದರು. ಅತ್ಯಂತ ಉತ್ತಮ ಸ್ವಭಾವದ, ಧಾರ್ಮಿಕ ಸೇವೆಗಾಗಿ ತಯಾರಾಗಿರುವ ಜಮಾಅತಿನ ಸೇವಕರಾಗಿದ್ದರು. ಚಿಕ್ಕಂದಿನಿಂದಲೇ ಮಸೀದಿಯೊಂದಿಗೆ ವಿಶೇಷವಾದ ಸಂಬಂಧವನ್ನು ಅವರು ಹೊಂದಿದ್ದರು. ದಿವಂಗತರು 8 ವರ್ಷಗಳಿಂದ ಖಾದಿಯಾನಿನ ನಝಾಮತ್ ತಾಮೀರಾತಿನಲ್ಲಿ ಬಹಳ ಉತ್ತಮ ರೀತಿಯಲ್ಲಿ ಸುಪ್ಪೈರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರು. ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದ್ದರು. ದಿವಂಗತರು ತನ್ನ ವಿಧವೆಯಾದ ಪತ್ನಿಯನ್ನು ಅಲ್ಲದೆ ತಂದೆತಾಯಂದಿರು, ಇಬ್ಬರು ಸಹೋದರರು ಮತ್ತು ಒಬ್ಬಳು ಸಹೋದರಿಯನ್ನು ಅಗಲಿರುವರು.

(ಇದಲ್ಲದೇ ಹುಝೂರ್ ಮುಬಲ್ಲಿಗ್‌ರಾದ ರಾಜ ಖುರ್ಶಿದ್ ಅಹ್ಮದ್ ಮುನೀರ್ ಸಾಹಿಬ್, ಮುರಬ್ಬಿಯಾದ ಝಮೀರ್ ಅಹ್ಮದ್ ನದೀಂ ಸಾಹಿಬ್, ತಾಂಜಾನಿಯಾದ ಸನ್ಮಾನ್ಯ ಈಸಾ ಮೂಕಿ ತುಲೈಮ ಸಾಹಿಬ್, ಸನ್ಮಾನ್ಯ ಸೈಫ್ ಅಲಿ ಶಾಹಿದ್ ಸಾಹಿಬ್, ಸನ್ಮಾನ್ಯ ಮಸ್‌ಊದ್ ಅಹ್ಮದ್ ಹಯಾತ್ ಸಾಹಿಬ್ ಇವರುಗಳ ಬಗ್ಗೆ ಪ್ರಸ್ತಾಪಿಸಿದ ನಂತರ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاۤءِ ذِى الْقُرْبٰى
وَيَنْهٰى عَنِ الْفَحْشَاۤءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 18-06-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at:** www.alislam.org/friday-sermon